# 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## SC.No.96/2019

CW. 7 PW.11

ದಿನಾಂಕಃ 26-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರುಃ | ತರುಣ್ ಎಸ್ ಎ |
| ತಂದೆಯ ಹೆಸರುಃ | ಅನಂತಮೂರ್ತಿ |
| ವಯಸ್ಸುಃ | 32 ವರ್ಷ |
| ವೃತ್ತಿಃ | ವ್ಯಾಪಾರ |
| ವಾಸಸ್ಥಳಃ | ಕುಣಿಗಲ್ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

ಸಾಕ್ಷಿ ಒಂದು ದಾಖಲೆಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿರುವ ದಾಖಲೆಯು ದಸ್ತಗಿರಿ ಅಂಗಶೋಧನ ಅಮಾನತ್ತು ಪಂಚನಾಮೆಯಾಗಿದ್ದು, ಇದನ್ನು ಈಗಾಗಲೇ ನಿಪಿ-39 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-39(ಬಿ) ಎಂದು ಗುರುತಿಸಲಾಯಿತು. ಆರೋಪಿಗಳನ್ನು ನಾನು ಈ ಹಿಂದೆ ನೋಡಿಲ್ಲ.

2) 2018 ನೇ ಇಸವಿಯಲ್ಲಿ ಕುಣಿಗಲ್ ಪೊಲೀಸ್ ರು ಯಾರನ್ನೊ ಹಿಡಿದಿದ್ದೇವೆ ಠಾಣೆಯ ಬಳಿ ಎಂದು ನಮಗೆ ತಿಳಿಸಿದ್ದರು,ಆಗ ನಾನು ಠಾಣೆಯ ಬಳಿ ಹೋದಾಗ ನಿಪಿ-39 ಕ್ಕೆ ನನ್ನ ಸಹಿ ಪಡೆದುಕೊಂಡರು. ಆ ದಿನ ಠಾಣೆಯಲ್ಲಿ ನ್ಯಾಯಾಲಯದ ಮುಂದೆ ಹಾಜರು ಇರುವ 2 ಮತ್ತು 4 ನೇ ಆರೋಪಿತರೋ ಇದ್ದರೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಆರೋಪಿತರ ಅಂಗಶೋಧನೆ ಮಾಡಿಲ್ಲ, ಅವರ ಬಳಿ ಯಾವುದೇ ವಸ್ತುಗಳನ್ನು

ಅಮಾನತ್ತುಪಡಿಸಿಕೊಂಡಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಸಹ ಮಾಡಿಲ್ಲ.

3) ಸಾಕ್ಷಿ ಮತ್ತೊಂದು ದಾಖಲೆಯನ್ನು ನೋಡಿ ಅದರಲ್ಲಿ ತಮ್ಮ ಸಹಿ ಇರುವುದಾಗಿ ಗುರುತಿಸಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯು ಮತ್ತೊಂದು ದಸ್ತಗಿರಿ ಅಂಗಶೋಧನ ಅಮಾನತ್ತು ಪಂಚನಾಮೆಯಾಗಿದ್ದು ಇದನ್ನು ಈಗಾಗಲೇ ನಿಪಿ-40 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-40(ಬಿ) ಎಂದು ಗುರುತಿಸಲಾಯಿತು.

4) ನಾನು 2018 ನೇ ಇಸವಿಯಲ್ಲಿ ಪೊಲೀಸರು ನನ್ನನು ಕರೆಸಿ ಸಾಕ್ಷಿಗೆ ಒಂದು ಸಹಿ ಮಾಡು ಎಂದು ತಿಳಿಸಿದ್ದರ ಮೇರೆಗೆ ನಾನು ನಿಪಿ-40 ಪಂಚನಾಮೆಗೆ ನನ್ನ ಸಹಿ ಮಾಡಿದ್ದೇನೆ . ಆ ದಿನ ಠಾಣೆಯಲ್ಲಿ ನ್ಯಾಯಾಲಯದ ಮುಂದೆ ಹಾಜರು ಇರುವ 2 ಮತ್ತು 4 ನೇ ಆರೋಪಿತರೋ ಇದ್ದರೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಆರೋಪಿತರ ಅಂಗಶೋಧನೆ ಮಾಡಿಲ್ಲ, ಅವರ ಬಳಿ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಸಹ ಮಾಡಿಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲನ್ನು ಸಹ ನಾನು ಈ ಹಿಂದೆ ನೋಡಿಲ್ಲ. ಪೊಲೀಸರು ಮುಂದೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ.

( ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಅಭಿಯೋಜಕರು ಪಾಟೀ ಸವಾಲಿಗೆ ಪರಿಗಣಿಸಲು ನ್ಯಾಯಾಲಯದ ಅನುಮತಿ ಕೋರಲಾಯಿತು. ನ್ಯಾಯಾಲಯವು ಅನುಮತಿಸಲಾಯಿತು)

**<u>ಪಾಟೀ ಸವಾಲುಃ ಸರ್ಕಾರಿ ಅಬಿಯೋಜಕರಿಂದ</u>**

5) ದಿ 26-11-2018 ರಂದು ಬೆಳಗ್ಗೆ 9 ಗಂಟೆ ಸುಮಾರಿಗೆ ಪೊಲೀಸರು ನನ್ನನ್ನು ಹಾಗೂ ಚಾಸಾ-8 ರವರನ್ನು ಕುಣಿಗಲ್ ವೃತ್ತ ನಿರೀಕ್ಷಕರ ಕಚೇರಿಗೆ ಬರಮಾಡಿಕೊಂಡು ಅವರ ವಶದಲ್ಲಿ ಇದ್ದ ಆರೋಪಿ-1,2,3,4,5 ರವರನ್ನು ತೋರಿಸಿ ಪ್ರಕರಣದ ವಿವರಗಳನ್ನು ನಮಗೆ ತಿಳಿಸಿದರು ಅಂದರೆ ಸರಿಯಲ್ಲ. ಪೊಲೀಸರು ನಮ್ಮ ಸಮಕ್ಷಮ ಮೇಲ್ಕಂಡ ಆರೋಪಿಗಳ ಅಂಗಶೋಧನೆ ಮಾಡಿ ಮೊದಲನೇ ಆರೋಪಿಯಿಂದ ಈ ದಿನ ನ್ಯಾಯಾಲಯದ ಮುಂದೆ ಇರುವ ಒಂದು ಸ್ಯಾಮ್ ಸಂಗ್ ಕಂಪನಿಯ ಕೀ ಪ್ಯಾಡ್ ಮೊಬೈಲ್ , 2 ನೇ ಆರೋಪಿಯ ಕಡೆಯಿಂದ ರೆಡ್ ಮಿ ಕಂಪನಿಯ ಮೊಬೈಲ್ , 3 ನೇ ಆರೋಪಿಯ ಕಡೆಯಿಂದ ಓಪ್ಪೋ ಕಂಪನಿಯ ಮೊಬೈಲ್ , 4 ನೇ ಆರೋಪಿಯ ಕಡೆಯಿಂದ ಸ್ಯಾಮ್ ಸಂಗ್ ಜೆ -7 ಪ್ರೈಮ್ ಮೊಬೈಲ್ , 5 ನೇ ಆರೋಪಿಯ ಕಡೆಯಿಂದ ಒಂದು ನೋಕಿಯೋ ಮೊಬೈಲ್ ನ್ನು ಅವರ ವಶದಿಂದ ಅಮಾನತ್ತುಪಡಿಸಿಕೊಂಡರು ಅಂದರೆ ಸರಿಯಲ್ಲ. ಮೇಲ್ಕಂಡ ಆರೋಪಿಗಳ ವಶದಿಂದ ಒಟ್ಟು ರೂ.31,100-0 ನಗದನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡು ಬೆಳಗ್ಗೆ 9 ಗಂಟೆಯಿಂದ 10 ಗಂಟೆಯವರಿಗೆ ನನಗೆ ಈಗ ಓದಿ ಹೇಳಿದ ನಿಪಿ-39 ರಂತೆ ಪಂಚನಾಮೆ ಜರೂಗಿಸಿ ನಿಪಿ-39(ಬಿ) ನನ್ನ ಸಹಿ ಪಡೆದರು ಅಂದರೆ ಸರಿಯಲ್ಲ.

6) ಅದೇ ದಿನ ಅಂದರೆ ದಿ 26-11-2018 ರಂದು ಕುಣಿಗಲ್ ಪೊಲೀಸರು ವೃತ್ತ ಕಚೇರಿಯಲ್ಲಿ ಆರೋಪಿ -6,7,8,9, ರವರನ್ನು ಪೊಲೀಸರು ದಸ್ತಗಿರಿ ಮಾಡಿದ್ದು ಈ ವಿಚಾರವನ್ನು ಸಹ ನನಗೂ ಹಾಗೂಚಾಸಾ-8 ರವರಿಗೆ ತಿಳಿಸಿ ಪಂಚರಾಗಿ ಸಹಕರಿಸುವಂತೆ ನಮ್ಮನ್ನು ಕೋರಿದ್ದರು ಅಂದರೆ ಸರಿಯಲ್ಲ. ಪೊಲೀಸರು ನಮ್ಮ ಸಮಕ್ಷಮ ಮೇಲ್ಕಂಡ

ಆರೋಪಿಗಳ ಅಂಗಶೋಧನೆ ಮಾಡಿ ಈ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ 1 ವಿವೋ ಕಂಪನಿಯ ಮೊಬೈಲ್ , ಸ್ಯಾಮ್ ಸಂಗ್ ಕಂಪನಿಯ ಕೀ ಪ್ಯಾಡ್ ಮೊಬೈಲ್ -(ಎ6 ವಶದಿಂದ ) , ಆರೋಪಿ -7 ಮಹೇಶ್ ರವರ ಕಡೆಯಿಂದ ಒಂದು ವಿವೋ ಕಂಪನಿಯ ಮೊಬೈಲ್ , ಆರೋಪಿ -8 ಅಭಿಷೇಕ್ ರವರ ವಶದಿಂದ ಒಂದು ಒಪ್ಪೋ ಕಂಪನಿಯ ಮೊಬೈಲ್ , ಆರೋಪಿ-9 ರಕ್ಷಿತ್ ರವರ ವಶದಿಂದ ಒಂದು ಮೋಟೋ ಕಂಪನಿಯ ಮೊಬೈಲ್ ನ್ನು ಅವರ ಅಂಗಶೋಧನೆ ಮಾಡಿ ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡರು ಅಂದರೆ ಸರಿಯಲ್ಲ. ಪೊಲೀಸರು ಎಲ್ಲಾ ಆರೋಪಿತರ ವಶದಿಂದ ಒಟ್ಟು ರೂ.23,450-00 ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡರು ಅಂದರೆ ಸರಿಯಲ್ಲ. ಪೊಲೀಸರು ಈ ಮೇಲ್ಕಂಡ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡು ಬೆಳಗ್ಗೆ 11 ರಿಂದ 12 ಗಂಟೆಯವರಿಗೆ ನಮ್ಮ ಸಮಕ್ಷಮ ಅಮಾನತ್ತುಪಂಚನಾಮೆ ಜರೂಗಿಸಿ ನಿಪಿ-40(ಡಿ) ರಂತೆ ಸದರಿ ಪಂಚನಾಮೆಗೆ ನನ್ನ ಸಹಿ ಪಡೆದರು ಅಂದರೆ ಸರಿಯಲ್ಲ.

7) ತನಿಖಾಧಿಕಾರಿಯವರು ಅದೇ ದಿನ ಮೇಲ್ಕಂಡ 2 ಪಂಚನಾಮೆಗಳ ಕುರಿತಾಗಿ ನಿಪಿ-41 ರಂತೆ ನನ್ನ ಹೇಳಿಕೆ ದಾಖಲಿಸಿಕೊಂಡರು ಅಂದರೆ ಸರಿಯಲ್ಲ.ನ್ಯಾಯಾಲಯದ ಮುಂದೆ ಇರುವ ವಸ್ತುಗಳನ್ನು , ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿಗಳನ್ನು ನಾನು ಈ ಹಿಂದೆ ನೋಡಿದ್ದರು ಸಹ ಆರೋಪಿಗಳನ್ನು ಶಿಕ್ಷೆಯಿಂದ ತಪ್ಪಿಸುವ ಸಲುವಾಗಿ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಎಲ್ಲಾ ಆರೋಪಿತರ ಪರ ವಕೀಲರಿಂದ** ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.